# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 187 (182) |
| ಸದಸ್ಯರ ಹೆಸರು | : | ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 14-12-2021 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ವಿಜಯಪುರ ನಗರದಲ್ಲಿ ಯಾವ ಯಾವ ಯೋಜನೆಗಳಿಂದ ರಸ್ತೆ ಅಭಿವೃದ್ದಿ, ಒಳಚರಂಡಿ ಇತರೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; | ವಿಜಯಪುರ ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ ಈ ಕೆಳಕಂಡ ಯೋಜನೆಗಳಲ್ಲಿ ರಸ್ತೆ ಅಭಿವೃದ್ಧಿ ಮತ್ತು ಇತರೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ:<br><br>1) **15ನೇ ಹಣಕಾಸು ಆಯೋಗದ ಅನುದಾನ– (2020-21, 2021-22)**<br>2020-21ನೇ ಸಾಲಿನಲ್ಲಿ 15ನೇ ಹಣಕಾಸು ಆಯೋಗದ ಅನುದಾನದಡಿ ವಿಜಯಪುರ ಮಹಾನಗರಪಾಲಿಕೆಗೆ ಶೇ.50 ರಷ್ಟು ಬಿಡುಗಡೆಯಾದ ಅನುದಾನದಲ್ಲಿ ನೀರು ಸರಬರಾಜು ಮತ್ತು ಘನತ್ಯಾಜ್ಯ ವಸ್ತು ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಉಳಿದ ಶೇ.50ರಷ್ಟು ಅನುದಾನದಲ್ಲಿ ರಸ್ತೆ ಅಭಿವೃದ್ಧಿ ಒಳಗೊಂಡಂತೆ ಇತರೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.<br><br>2021-22ನೇ ಸಾಲಿನಲ್ಲಿ 15ನೇ ಹಣಕಾಸು ಆಯೋಗದ ಅನುದಾನದಡಿ ವಿಜಯಪುರ ಮಹಾನಗರಪಾಲಿಕೆಗೆ ಹಂಚಿಕೆಯಾದ ಅನುದಾನದಲ್ಲಿ ಶೇ.60ರಷ್ಟು ಅನುದಾನದಲ್ಲಿ ನೀರು ಸರಬರಾಜು ಮತ್ತು ಘನತ್ಯಾಜ್ಯ ವಸ್ತು ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಉಳಿದ ಮುಕ್ತ ಅನುದಾನದ ಶೇ.40ರಷ್ಟು ಅನುದಾನದಲ್ಲಿ ರಸ್ತೆ ಅಭಿವೃದ್ಧಿ ಒಳಗೊಂಡಂತೆ ಇತರೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.<br><br>2) **ಕೇಂದ್ರ ಪುರಸ್ಕೃತ ಅಮೃತ್ ಯೋಜನೆ: (2015-16 ರಿಂದ 2020-21)**<br>ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿ ವಿಜಯಪುರ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ನೀರು ಸರಬರಾಜು, ಹಸಿರು ಜಾಗ ಮತ್ತು ಉದ್ಯಾನವನ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. |

<table>
<tr><td></td><td></td><td>ವಿಜಯಪುರ ಮಹಾನಗರಪಾಲಿಕೆಗೆ 2018-19ನೇ ಸಾಲಿನಿಂದ 2020-21ನೇ ಸಾಲಿನವರೆಗೆ ಎಸ್.ಎಫ್.ಸಿ ಮುಕ್ತನಿಧಿ/ ಎಸ್.ಎಫ್.ಸಿ ವಿಶೇಷ ಅನುದಾನದಡಿ ರಸ್ತೆ ಅಭಿವೃದ್ಧಿ, ಒಳಚರಂಡಿ ಇತರೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.<br><br>3) ರೂ.100 ಕೋಟಿ ನಗರೋತ್ಥಾನ ಹಂತ-3<br>ರಸ್ತೆ ಅಭಿವೃದ್ಧಿ, ಒಳಚರಂಡಿ ಮತ್ತು ಇತರೆ ಕಾಮಗಾರಿಗಳನ್ನು ಗುಲಬರ್ಗಾ ಕ್ಯಾಬಿನೆಟ್ ಯೋಜನೆಯಡಿಯಲ್ಲಿ ಮತ್ತು ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯಡಿಯಲ್ಲಿ ಕೈಗೊಳ್ಳಲಾಗುತ್ತಿದೆ.</td></tr>
<tr><td>ಆ)</td><td>ಈ ಕಾಮಗಾರಿಗಳಿಗೆ ಒದಗಿಸಲಾಗಿರುವ ಅನುದಾನವೆಷ್ಟು? (ಕಾರ್ಯ ಪ್ರಗತಿಯ ವಿವರ ನೀಡುವುದು)</td><td>2018-19ನೇ ಸಾಲಿನಿಂದ 2020-21ನೇ ಸಾಲಿನವರೆಗೆ ಎಸ್.ಎಫ್.ಸಿ ಮುಕ್ತನಿಧಿ/ ಎಸ್.ಎಫ್.ಸಿ ವಿಶೇಷ ಅನುದಾನದಡಿ ಒದಗಿಸಲಾಗಿರುವ ಅನುದಾನದ ವಿವರ ಹಾಗೂ ಕೈಗೊಂಡ ಕಾಮಗಾರಿಗಳ ಪ್ರಗತಿಯ ವಿವರವನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.<br><br>15ನೇ ಹಣಕಾಸು ಆಯೋಗದ ಅನುದಾನದಡಿ ಕೈಗೊಂಡಿರುವ ಕಾಮಗಾರಿಗಳಿಗೆ ಒದಗಿಸಿರುವ ಅನುದಾನ ಈ ಕೆಳಕಂಡಂತಿದೆ;<br><br>(ರೂ. ಲಕ್ಷಗಳಲ್ಲಿ)
<table>
<tr><th>ಯೋಜನೆ</th><th>ಸಾಲು</th><th>ಹಂಚಿಕೆ</th><th>ಬಿಡುಗಡೆ</th></tr>
<tr><td rowspan="2">15ನೇ ಹಣಕಾಸು ಆಯೋಗದ ಅನುದಾನ</td><td>2020-21</td><td>2022.00</td><td>2022.00</td></tr>
<tr><td>2021-22</td><td>1500.00</td><td>750.00</td></tr>
<tr><td>ಅಮೃತ್ ಯೋಜನೆ</td><td>2015-16 ರಿಂದ 2021-22</td><td>18198.00</td><td>16650.00</td></tr>
</table>
<br>ಕಾಮಗಾರಿಯ ಪ್ರಗತಿ ವಿವರಗಳನ್ನು ಅನುಬಂಧ-2 ಮತ್ತು 3ರಲ್ಲಿ ಲಗತ್ತಿಸಿದೆ.<br><br>ರೂ.100 ಕೋಟಿ ನಗರೋತ್ಥಾನ ಹಂತ-3ರ ಅನುದಾನದ ಹಾಗೂ ಕಾಮಗಾರಿ ಪ್ರಗತಿಯ ವಿವರಗಳನ್ನು ಅನುಬಂಧ-4 ಮತ್ತು 5ರಲ್ಲಿ ಲಗತ್ತಿಸಿದೆ ಹಾಗೂ ಮಹಾತ್ಮಗಾಂಧಿ ನಗರ ವಿಕಾಸ ಯೋಜನೆಯಡಿಯಲ್ಲಿ ಅನುದಾನದ ಹಾಗೂ ಕಾಮಗಾರಿ ಪ್ರಗತಿಯ ವಿವರಗಳನ್ನು ಅನುಬಂಧ-6ರಲ್ಲಿ ಲಗತ್ತಿಸಿದೆ.</td></tr>
</table>

ಕಡತ ಸಂಖ್ಯೆ:ನಅಇ 489 ಎಸ್.ಎಫ್.ಸಿ 2021

**(ಬಿ.ಎ. ಬಸವರಾಜ)**
ನಗರಾಭಿವೃದ್ಧಿ ಸಚಿವರು

## ABSTRACT REPORT

### SFC UNTIED PROGRAMME

Rs. in Lakhs

| 1 | 2 | 3 | 4 | 5 | 6 | 7 | 8 | 9 | 10 | 11 | 12 |
|---|---|---|---|---|---|---|---|---|---|---|---|
| SL NO | District | Name Of the Town | ULB Type | YEAR | Grants Allocation | Grants Released | Expenditure | Total Approved Works | Completed Works | Works Started/Ongoing | Under Tender Process/Tender to be Invited |
| 1 | Vijapura | Vijapura | CC | 2018-19 | 1365 | 1073.03 | 1058.87 | 7 | 7 | 0 | 0 |
| 2 | | | | 2019-20 | 1170 | 966.37 | 809.66 | 39 | 38 | 1 | 0 |
| 3 | | | | 2020-21 | 306.75 | 306.75 | 306.69 | 7 | 2 | 5 | 0 |
| | | | | **TOTAL** | **2841.75** | **2346.15** | **2175.22** | **53** | **47** | **6** | 0 |

### SFC SPECIAL GRANTS PROGRAMME

| 1 | 2 | 3 | 4 | 5 | 6 | 7 | 8 | 9 | 10 | 11 | 12 |
|---|---|---|---|---|---|---|---|---|---|---|---|
| 1 | Vijapura | Vijapura | CC | 2018-19 | 500 | 500 | 499.5 | 1 | 1 | 0 | 0 |
| 2 | | | | 2019-20 | 1500 | 875 | 855.9645 | 4 | 1 | 2 | 1 |
| 3 | | | | 2020-21 | 0 | 0 | 0 | 0 | 0 | 0 | 0 |
| | | | | **TOTAL** | **2000** | **1375** | **1355.4645** | **5** | 2 | **2** | 1 |

CHIEF PROJECT OFFICER
Urban Poverty Alleviation Management Unit
Directorate of Municipal Administration
Bangalore